ದಿನಗಳ ಈ ಪಾಪ್ಯುಲರ್ ಯುರೋಪ್ ಟೂರಿನ ಹತ್ತು ದಿನಗಳು ನೋಡನೋಡುತ್ತಲೇ ಹಾರಿಹೋಗಿವೆ. ಲಂಡನ್, ಪ್ಯಾರಿಸ್, ಸ್ವಿಟ್ಜರ್ಲೆಂಡ್ ಮುಗಿಸಿ ಹನ್ನೊಂದನೇ ದಿನವಾದ ಇಂದು ಜರ್ಮನಿಯ ಕಂಟ್ರಿಸೈಡ್‌ನಲ್ಲಿರುವ, ಮರವನ್ನೇ ಹೆಚ್ಚಾಗಿ ಬಳಸಿ ಕಟ್ಟಿರುವ ಶಾಲೆ ಎನ್ನುವ ಈ ಹೋಟೆಲ್ಲಿಗೆ ಬಂದು ಇಳಿದಿದ್ದಾರೆ. ಹೊರಗಿನಿಂದ ಕೇವಲ ಒಂದು ಮನೆಯಂತೆ ಮಾತ್ರ ಕಾಣುವ ಈ ಶಾಲೆಗಳು ಒಳಗಡೆ ಇಷ್ಟೆಲ್ಲ ರೂಮುಗಳು, ವಿಶಾಲವಾದ ಡೈನಿಂಗ್ ಹಾಲ್‌ಗಳನ್ನೆಲ್ಲ ಬಚ್ಚಿಟ್ಟುಕೊಂಡ ಗುಟ್ಟು ಒಳಬಂದ ಮೇಲಷ್ಟೇ ಬಿಚ್ಚಿಕೊಂಡಿದೆ. ಬಸ್ಸಿನಲ್ಲಿ ಹೋಗುವಾಗ ಕಂಡ ಈ ಮನೆಗಳನ್ನು ನೋಡಿ ಶಾಲೂ, ''ದೂರ ಬೆಟ್ಟದಲ್ಲಿ ಪುಟ್ಟ ಮನೆಯಿರಬೇಕು, ಮನೆಯ ಸುತ್ತ ಹೂವ ರಾಶಿ ಹಾಸಿರಬೇಕು. ತಂಗಾಳಿಯು ಜೋಗುಳವ ಹಾಡಲೇ ಬೇಕು, ಬಂಗಾರದ ಹೂವೇ ನೀನು ನಗುತಿರಬೇಕು, ನನ್ನ ಜೊತೆಯಿರಬೇಕು'' ಎಂದು ಹಾಡಿಕೊಳ್ಳುತ್ತಿರುವುದನ್ನು ಕನ್ನಡಿಯಲ್ಲಿ ನೋಡಿ ಎಡ್ಡಿ ಹೆಬ್ಬೆರಳನ್ನು ತೋರಿಸಿದ್ದ. ಈ ಹಾಡನ್ನು ಬರೆದ ಕವಿ ಇಲ್ಲಿಗೆ ಬಂದುಹೋಗಿರಲೇ ಬೇಕು. ವಿಶಾಲವಾಗಿ ಹರಡಿರುವ ಹಸಿರು ಹಾಸಿನ ಬೆಟ್ಟಗಳ ಮೇಲೆ ಕಟ್ಟಿರುವ ಈ ಮನೆಗಳನ್ನು ನೋಡಿದರೆ ಎಂಥ ಕಲ್ಲು ಹೃದಯಿಯೂ ರಸಿಕತೆಯಿಂದ ತಲೆದೂಗಬೇಕು ಹಾಗಿದೆ ಪ್ರಕೃತಿಯೊಡನೆ ಮಾನವನ ಅನುಸಂಧಾನ. ಇದು ನಿಜವಾಗಿಯೂ ದೃಶ್ಯ ಕಾವ್ಯವೇ ಎಂದೆನಿಸಿ ಜೀವನದಲ್ಲಿ ಒಮ್ಮೆಯಾದರೂ ಇಂಥ ಸೌಂದರ್ಯವನ್ನು ಸವಿಯಲೇಬೇಕು ಎಂದೆಲ್ಲ ಯೋಚಿಸುತ್ತ ಕಿಟಕಿಯಿಂದ ಹೊರಗೆ ಕಣ್ಣು ಚಾಚಿ ಕುಳಿತವಳ ಪಕ್ಕದಲ್ಲಿ ಅದ್ಯಾವ ಮಾಯೆಯಲ್ಲಿ ಫೆಲಿಕ್ಸ್ ಬಂದು ಕುಳಿತಿದ್ದ ಗೊತ್ತೇ ಆಗಿರಲಿಲ್ಲ.

''ಹಾಯ್, ನಾನು ನಿನ್ನ ಕನಸುಗಳಿಗೆ ಡಿಸ್ಟರ್ಬ್ ಮಾಡುತ್ತಿಲ್ಲ ಅಂದಕೋತೇನೆ'' ಎಂದವನನ್ನು ನೋಡಿ ಸ್ವಲ್ಪ ಇರಿಸುಮುರಿಸಾಯಿತು. ಉಸಿರು ತಾಕುವಷ್ಟು ಹತ್ತಿರ ಕುಳಿತು ಮಾತನಾಡುತ್ತಿದ್ದಾನೆ. ನಮ್ಮೂರಿನ ಬಸ್ಸುಗಳಲ್ಲಾದರೆ ಇಷ್ಟರಲ್ಲಿ ಒಂದು ಗಲಾಟೆಯನ್ನೇ ಎಬ್ಬಿಸಬಹುದಿತ್ತು ಎನಿಸಿ ಒಮ್ಮೆಲೇ ನಗು ಬಂತು. ಅವನು ಅಚ್ಚರಿ ತುಂಬಿದ ಮೆಚ್ಚುಗೆಯಿಂದ ಇವಳತ್ತಲೇ ನೋಡುತ್ತ, ''ಏಕೆ ನಗ್ತಿದ್ದೀಯಾ?'' ಎಂದ. ಇವಳು ಮತ್ತೆ ಸುಮ್ಮನೇ ನಕ್ಕಿದ್ದಳು. ''ಐ ಲೈಕ್ ಇಂಡಿಯನ್ಸ್. ದೆ ಆರ್ ವೆರಿ ಡೀಸೆಂಟ್ ಪೀಪಲ್'' ಎಂದವನು, ''ಜಸ್ಟ್ ಲೈಕ್ ಯೂ'' ಎಂದೂ ಸೇರಿಸಿದ್ದ. ಇವಳು ಮತ್ತೆ ಜುಳುಜುಳು ನಕ್ಕಳು. ''ವಯಸ್ಸಿನ ಲೆಕ್ಕ ತಪ್ಪಿದೆ. ಐವತ್ತರ ನಮ್ಮ ಶಾಲೂ ಇಪ್ಪತ್ತರ ಹರೆಯಕ್ಕೆ ಮರಳಿದ್ದಾಳೆ'' ಎಂದು ಹಿಂದೆ ಕುಳಿತ ಗೆಳತಿಯರು ಕಮೆಂಟ್ ಹೊಡೆದದ್ದು ಅವಳಿಗೆ ಕೇಳಿಸಿದರೂ ಹಚ್ಚಿಕೊಳ್ಳದೇ ತನ್ನದೇ ಗುಂಗಿನಲ್ಲಿದ್ದಳು ಶಾಲೂ. ಫೆಲಿಕ್ಸನ ಸಾಮಿಪ್ಯ ಯಾಕೋ ಮತ್ತೇರಿಸುತ್ತಿದೆ ಎನಿಸಿತು. ಅವನ ವಯಸ್ಸೆಷ್ಟಿರಬಹುದು? ನಲವತ್ತೋ, ಐವತ್ತೋ ತಿಳಿಯುವುದಿಲ್ಲ. ಹ್ಯಾಂಡ್‌ಸಮ್ ಮ್ಯಾನ್, ಆರಡಿ ಎತ್ತರದ ಸಪೂರ ಮನುಷ್ಯ. ಶಾಲೂ ಜೊತೆ ಮಾತಿಗಿಳಿದ ಫೆಲಿಕ್ಸ್ ತನ್ನ ಪೂರ್ವಾಪರಗಳನ್ನು ಬಿಚ್ಚಿದ. ಯುರೋಪಿಯನ್ ಮಾಡರ್ನ್ ಹಿಸ್ಟರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾನೆ. ಮೂಲತಃ ಆಸ್ಟ್ರಿಯಾದವನು.

ವಿದೇಶಗಳಿಂದ ಬರುವ ಟೂರಿಸ್ಟ್‌ಗಳಿಗೆ ಹೀಗೆ ಗೈಡ್ ಆಗುವುದಕ್ಕೂ ಮೊದಲು ವಿಯನ್ನಾದ ಮ್ಯೂಸಿಯಂ ಒಂದರಲ್ಲಿ ಕ್ಯೂರೇಟರ್ ಆಗಿ ಕೆಲಸ ಮಾಡುತ್ತಿದ್ದನಂತೆ. ಮೊದಮೊದಲು ಸಾಕಷ್ಟು ಉತ್ಸಾಹದಿಂದಲೇ ಮ್ಯೂಸಿಯಂನ ಕೆಲಸದಲ್ಲಿ ತೊಡಗಿಸಿಕೊಂಡವನಿಗೆ ಕೆಲ ವರ್ಷಗಳ ನಂತರ ಒಂದೇ ಸ್ಥಳದಲ್ಲಿ ಕಟ್ಟಿಹಾಕಿಕೊಳ್ಳುವುದು ಬೇಸರ ಹುಟ್ಟಿಸಿತಂತೆ. ಆದರೂ ಅಲ್ಲಿ ಅಪರೂಪದ ವಸ್ತುಗಳನ್ನು ಕಲೆ ಹಾಕುವುದು, ಅವುಗಳ ಮಾಹಿತಿ ಸಂಗ್ರಹಿಸುವುದು, ಮ್ಯೂಸಿಯಂ ನೋಡಲು ಬರುವ ಜನರಿಗೆ ವಿವರಿಸುವುದು, ಹ್ಯಾಂಡ್‌ಬುಕ್‌ಗಳನ್ನು ಪ್ರಿಂಟ್ ಮಾಡುವುದು ಮುಂತಾದ ಕೆಲಸಗಳು ಅವನಿಗೆ ಸಾಕಷ್ಟು ಅನುಭವವನ್ನು ನೀಡಿದ್ದರಿಂದ ಯುನಿವರ್ಸಿಟಿಯಲ್ಲಿ ಪ್ರೊಫೆಸರ್ ಹುದ್ದೆ ಸಿಕ್ಕುವುದು ಕಷ್ಟವಾಗಿರಲಿಲ್ಲ. ಆದರೆ, ದೇಶ ತಿರುಗಬೇಕೆಂಬ ಅಲೆಮಾರಿ ಮನಸ್ಸಿಗೆ ಆ